


ಆಫ್ರಿಕಾ ಖಂಡದಲ್ಲೇ ಅತೀ ಎತ್ತರವೆನಿಸಿರುವ ಹಸನ್ II ಮಸೀದಿ

ಉದ್ಯಾನವನಗಳು, ಅಟ್ಲಾಸ್ ಪರ್ವತ ಶ್ರೇಣಿಗಳನ್ನು ಕಣ್ತುಂಬಿಸಿಕೊಂಡು ಮರುದಿನ ಬಿಸಿಗಾಳಿಯ ಬಲೂನ್ ಸವಾರಿಗೆ ತಯಾರಾದೆವು. ನಸುಕು 4 ಗಂಟೆಗೆ ಎದ್ದು ಚಳಿಯಲ್ಲಿ ಗಡಗಡ ನಡುಗುತ್ತಾ ಬಲೂನ್ ಬುಟ್ಟಿಯಲ್ಲಿ ಆಕಾಶಕ್ಕೆ ಚಿಮ್ಮಿ ಸೂರ್ಯದರ್ಶನ ಮಾಡಿದಾಗ ಜೀವನ ಸಾರ್ಥಕ ಆಯಿತು ಎನಿಸಿದ್ದು ಸುಳ್ಳಲ್ಲ. ಬರ್ಬರ್ ಉಪಾಹಾರ, ಕುದುರೆಗಾಡಿಯ ಸವಾರಿ, ಕುಂಬಾರ ಕಾರ್ಖಾನೆ ಮುಗಿಸಿ ಮರಕೇಶ್‌ನಿಂದ ಹೊರಟು ದಾರಿಯಲ್ಲಿ ಗುಲಾಬಿ ಕಣಿವೆಯಲ್ಲಿ ಸುಗಂಧವನ್ನು ತುಂಬಿಕೊಂಡೆವು. ಆರ್ಗನ್ ಎಣ್ಣೆ (**Argon seed**ನಿಂದ ತಯಾರಿಸಿದ್ದು) ನಮ್ಮ ಬ್ಯಾಗಿಗೆ ಸೇರಿತು.

ಮೊರಾಕ್ಕನ್ ವ್ಯಾಪಾರದಲ್ಲಿ ಮೊರಾಕ್ಕನ್ ದಿರಂ (**Moroccan Dirham–DH**) ಇವರ ಕರೆನ್ಸಿ. ಡಾಲರ್, ಯೂರೋ ಕೂಡ ಸ್ವೀಕರಿಸುತ್ತಾರೆ. **1 USD = 10 DH = Rs. 100** (ಅಂದಾಜು). ನಾವು ಏನನ್ನು ಖರೀದಿಸಿದರೂ ವ್ಯಾಪಾರಿಗಳು ದಿರಂನಲ್ಲಿ ಹೇಳುತ್ತಾರೆ. ಉದಾ 200 ದಿರಂ. ಅಮೆರಿಕದಲ್ಲಿರುವ ಮಗನಿಗೆ ಇದು 20 **USD** ಮಾತ್ರ ಅಂತ ಖುಷಿ. ಭಾರತೀಯರಾದ ನಮಗೆ, ಹಾ! 2000 ರೂ. ಜಾಸ್ತಿ ಆಯಿತು ಅಂತ ಹಿಂದೆ ಚಿಮ್ಮುತ್ತಿದ್ದೆವು.

ದಾರಿಯಲ್ಲಿ ಅಟ್ ಬೆನ್‌ಹಡೂ (**Ait Benhaddou**) ಅನ್ನುವ ಬರ್ಬರ್ ಹಳ್ಳಿಗೆ ಭೇಟಿ ನೀಡಿದೆವು. ಅರಬ್ ಗಂಡಸರು ತಲೆಗೆ ಸುತ್ತಿಕೊಳ್ಳುವ ಸ್ಕಾರ್ಫ್ ಅನ್ನು ಕೊಂಡು ನಮ್ಮ ಮಕ್ಕಳು ಕೆಲವು ಕ್ಷಣ ಅರಬ್ಬಿ ಜನರಂತೆ ವಿಜೃಂಭಿಸಿದರು. ಕಂದು ಕಟ್ಟಡಗಳ ನಡುವೆ ಒಂದು ಎತ್ತರದ ಗುಡ್ಡವನ್ನು ಏರಲು ಕಿರಿಯರು ತೆರಳಿದಾಗ ನಾನು ಅಲ್ಲೇ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದೆ. ಆಗ ಅಲ್ಲೇ ಇದ್ದ 60–70ರ ಅರಬ್ಬೀ ಮುದುಕನೊಬ್ಬ ನನ್ನನ್ನೇ ದೃಷ್ಟಿಸಿ ನೋಡುತ್ತಾ ನನ್ನ ಹಣೆಯ ಮೇಲಿನ ಬಿಂದಿಯನ್ನು ತೋರಿಸುತ್ತಾ ಅದೇನೆಂದು ಸಂಜ್ಞೆಯಲ್ಲಿ ಕೇಳಿದ. ತನಗೂ ಒಂದು ಬೇಕು ಅಂತ ಬೇಡಿದ. ನನ್ನ ಪರ್ಸ್‌ನಿಂದ ಒಂದೆರಡನ್ನು ಅವನಿಗೆ ನೀಡಿದೆ. ತುಂಬಾ ಕಷ್ಟಪಟ್ಟು ನನ್ನ ಸಹಾಯದಿಂದ ತನ್ನ ಹಣೆಯ ಮೇಲೆ ಅಂಟಿಸಿಕೊಂಡು ಗೆಲುವಿನ ನಗೆ ಬೀರಿದ. 20 ನಿಮಿಷಗಳ ಮೇಲೆ ಬೆಟ್ಟದ ಮೇಲಿಂದ ನಗರ ಸೌಂದರ್ಯ ವೀಕ್ಷಿಸಿ ಎಲ್ಲರೂ ಹಿಂತಿರುಗಿದ ಮೇಲೆ ಆ ಮುದುಕನನ್ನು ಹಾದುಹೋಗುವಾಗ ಅವನ ಬೋಡುತಲೆ ಮೇಲೆ ಅದೇ ಬಿಂದಿ ರಾರಾಜಿಸುತ್ತಿತ್ತು. ನನಗೆ ಶುಕ್ರನ್ (ಧನ್ಯವಾದ) ಅಂತ ಹೇಳಿದ. ಎರಡು ಮೂರು ಕಡೆ ಮೊರಾಕ್ಕೊನಲ್ಲಿ ನಮ್ಮ ಬಿಂದಿಯ ಮೇಲೆ ಅಲ್ಲಿನ ಹೆಣ್ಮಕ್ಕಳಿಗೆ ಕುತೂಹಲ ಕಂಡೆ. ಏಕೆ ಧರಿಸುತ್ತೀರ ಇದನ್ನು ಅಂತ ಕೇಳಿ ತಿಳಿದುಕೊಂಡರು. ಮುಂದೆ ಮರ್ಜೂಗಾ (**Merzouga**)ನಲ್ಲಿ ಮರಳುಗಾಡಿನ ಪ್ರಯಾಣಕ್ಕೆ ತಯಾರಾದೆವು.



ಸೂಕ್ ಎಂದು ಕರೆಯಲಾಗುವ ಮಾರುಕಟ್ಟೆ

ಮರಳು ದಿಣ್ಣೆಗಳ ಮೇಲೆ ರೋಲರ್ ಕೋಸ್ಟರ್ ಮಾದರಿಯಲ್ಲಿ ಜೀಪಿನಲ್ಲಿ 40–50 ಕಿ.ಮೀ. ವೇಗದಲ್ಲಿ ಅವರು ಕರೆದುಕೊಂಡು ಹೋದರೆ ಜೀವ ಭಯದಿಂದ ನಾವು ಕಿರಿಚಿಕೊಂಡೆವು. ಒಂಟೆ ಪ್ರಯಾಣದ ವಿಶೇಷ ಅನುಭವ ಮುಗಿಸಿ, ಐಷಾರಾಮಿ ಟೆಂಟ್ ಮನೆಯಲ್ಲಿ ಎಲ್ಲಾ ಸೌಕರ್ಯಗಳಿದ್ದರೂ ಮರಳುಗಾಡಿನ ರಾತ್ರಿಯ ಚಳಿಯಲ್ಲಿ ನಡುಗುತ್ತಾ ರಾತ್ರಿ ಕ್ಯಾಂಪ್‌ಫೈರ್, ಬರ್ಬರ್ ಸಂಗೀತದ ಅನುಭೂತಿ ಪಡೆದು ಬೆಚ್ಚಗಾದೆವು.

ಮೊರಾಕ್ಕೊ ದೇಶದ ನಮ್ಮ ಒಂಬತ್ತು ದಿನಗಳ ಪ್ರಯಾಣದಲ್ಲಿ ನಮ್ಮ ಭಾರತದಲ್ಲಿ ಕಂಡುಬರುವ ಅಸಂಖ್ಯಾತ ಸಾಕು ಮತ್ತು ಬೀದಿನಾಯಿಗಳು ಕಾಣಲೇ ಇಲ್ಲ. ಒಂದೆರಡು ನಾಯಿಗಳು ಕಣ್ಣಿಗೆ ಬಿದ್ದವು ಅಷ್ಟೇ. ಆದರೆ ಅನೇಕಾನೇಕ ಬೆಕ್ಕುಗಳು ಎಲ್ಲೆಲ್ಲೂ ಕಂಡುಬರುತ್ತಿದ್ದವು. ಹೋಟೆಲ್‌ಗಳಲ್ಲಿ ನಾವು ಊಟ ಮಾಡುತ್ತಿದ್ದಾಗ ನಮ್ಮ ತೊಡೆ ಏರಲೂ ಹಿಂಜರಿಯುತ್ತಿರಲಿಲ್ಲ.

ಮುಂದೆ ಫೆಝ್ (**Fez**) ನಗರದಲ್ಲಿ ಚರ್ಮ ಕೈಗಾರಿಕೆ ಮತ್ತು ಕೈಮಗ್ಗ ನೇಯ್ಗೆ ಇವುಗಳನ್ನೂ ನೋಡಿ ಮೊರಾಕ್ಕೊ ರಾಜಧಾನಿ ರಬಾತ್ ಮುಖಾಂತರ ಕಾಸಾಬ್ಲಾಂಕಾಗೆ ವಾಪಸಾದೆವು. ಅಲ್ಲಿ ಹಸನ್ II ಅವರು (ಈಗಿನ ರಾಜರ ತಂದೆ) ದೇಶಕ್ಕೆ ಸ್ವಾತಂತ್ರ್ಯ ದೊರಕಿದ ಬಳಿಕ ಕಟ್ಟಿಸಿದ, ಆಫ್ರಿಕಾ ಖಂಡದಲ್ಲೇ ಅತೀ ಎತ್ತರವೆನಿಸಿದ ಮಸೀದಿಗೆ ಭೇಟಿ ಇತ್ತೆವು. 11000 ಕೆಲಸಗಾರರು ಎರಡು ವರ್ಷ ತೆಗೆದುಕೊಂಡು ಕಟ್ಟಿದ ಅಪೂರ್ವ ಕಟ್ಟಡವದು. ಅದರ ಒಳಗಿನ ಕೆತ್ತನೆ ಕುಸುರಿ ಕೆಲಸಗಳಿಗೆ, ವೈಭವಕ್ಕೆ ತಲೆಬಾಗಿದೆವು. ಅವರ ದೇಶದ ನಾಣ್ಯಗಳ ಮೇಲೆ ಅದರದೇ ಚಿತ್ರ ಇದೆ.

ಅಟ್ಲಾಂಟಿಕ್ ಸಮುದ್ರದ ಅಪ್ಪಳಿಸುವ ಅಲೆಗಳನ್ನು ನೋಡುತ್ತಲೇ ಮೊರಾಕ್ಕೊವಿನ ಕಲಾವಂತಿಕೆಗೆ, ಸಹೃದಯತೆಗೆ ನಮಿಸಿ ವಿಮಾನ ಹತ್ತಿದೆವು.